

ಆ ವರ್ಷ—1946—ಚಳಿಗಾಲ ಅಂತ್ಯಗೊಳ್ಳುವ ಯಾವ ಲಕ್ಷಣಗಳೂ ಕಾಣಿಸುತ್ತಿರಲಿಲ್ಲ. ಆಗಾಗಲೇ ಏಪ್ರಿಲ್ ತಿಂಗಳು ಆರಂಭಗೊಂಡಿತ್ತಾದರೂ ರಕ್ತ ಹಿಮಗಡ್ಡೆಯಾಗುವಂತೆ ಶೀತಲ ಗಾಳಿ ಕೊರೆಯುತ್ತಿತ್ತು. ಅಗಸದಲ್ಲಿ ಮಂಜುಗಡ್ಡೆಯಂತಹ ಮೋಡಗಳು ಸಾಲುಗಟ್ಟಿ ತೇಲುತ್ತಿದ್ದವು.

ಮುದುಕ ಡ್ರಿಯೋಲಿ ಯರ್ೂ ದೆ ರಿವೊಲಿಯ ಫುಟ್‌ಪಾತಿನಲ್ಲಿ ಪ್ರಯಾಸದಿಂದ ಕಾಲುಗಳನ್ನು ಎಳೆಯುತ್ತಾ ಬರುತ್ತಿದ್ದ. ತಣ್ಣನೆಯ ಗಾಳಿಯಿಂದ ಅವನು ಕಂಗೆಟ್ಟಿದ್ದ. ತನ್ನ ಕೊಳಕಾದ ಕೋಟನ್ನು ಬಿಗಿಯಾಗಿ ತನ್ನ ಕೃಶ ಶರೀರಕ್ಕೆ ಸುತ್ತಿಕೊಂಡಿದ್ದ. ಅವನ ಕಣ್ಣುಗಳಷ್ಟೇ ಹೊರಕ್ಕೆ ಕಾಣಿಸುತ್ತಿದ್ದವು

ಬೀದಿ ಬದಿಯ ಒಂದು ಹೋಟೆಲು ತೆರೆದಿತ್ತು. ತಣ್ಣನೆಯ ಗಾಳಿಯೊಂದಿಗೆ, ರೋಸ್ಟ್ ಮಾಡುತ್ತಿದ್ದ ಚಿಕನ್ನಿನ ಪರಿಮಳ ಅವನ ಮೂಗಿನ ಬುಡದಿಂದ ಮೇಲಕ್ಕೆ ನುಗ್ಗಿದಾಗ ಅವನ ಹೊಟ್ಟೆಯೊಳಗಿನ ಜಂತುಹುಳಗಳು ಕೊಸರಾಡಿದವು. ಮುದುಕ ಬಲವಂತದಿಂದ ಮುಂದಕ್ಕೆ ನಡೆದ. ಬದಿಯ ಅಂಗಡಿಗಳ ಶೋಕೇಸಿನೊಳಗೆ ಜೋಡಿಸಿಟ್ಟಿದ್ದ ವಸ್ತುಗಳ ಮೇಲೆ ಅವನಿಗೆ ಆಸಕ್ತಿ ಇರಲಿಲ್ಲ. ಮುಂದಕ್ಕೆ ನಡೆದಂತೆ ಒಂದು ಕಲಾ ಗ್ಯಾಲರಿಯ ಶೋಕೇಸಿನೊಳಗೆ ತೂಗಿಬಿಟ್ಟಿದ್ದ ಒಂದು ಪೇಂಟಿಂಗ್ ಅವನನ್ನು ತಡೆದು ನಿಲ್ಲಿಸಿತು. ಪೇಂಟಿಂಗ್ಸ್ ಎಂದರೆ ಮುದುಕನಿಗೆ ಏನೋ ಆಕರ್ಷಣೆ. ಬಹಳ ಹೊತ್ತು ಅದನ್ನು ಗಮನಿಸಿ ಮುಂದಕ್ಕೆ ಹೆಜ್ಜೆ ಇಡಲು ಹೋದವನಿಗೆ ಏನೋ ನೆನಪಾಗಿ ಅವನು ಕೊಂಚ ಅಸ್ವಸ್ಥನಾದ. ಮತ್ತೊಮ್ಮೆ ಅವನು ಆ ಪೇಂಟಿಂಗನ್ನು ದಿಟ್ಟಿಸಿದ. ಅದೊಂದು ಪ್ರಕೃತಿ ಚಿತ್ರ. ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ನುಜ್ಜುಗುಜ್ಜಾದ ಭೂದೃಶ್ಯ. ಚಿತ್ರದ ಕೆಳಗೆ ಕಲಾವಿದನ ಹಸ್ತಾಕ್ಷರವಿತ್ತು: ಸೂಟಿನ್, 1894.

ಆ ಚಿತ್ರ ತನಗೇಕೆ ಆಪ್ತವಾಯಿತೆಂದು ಮುದುಕ ತನ್ನ ನೆನಪನ್ನು ಕೆದಕಲಾರಂಭಿಸಿದ. ಚಾಯ್ಮ್ ಸೂಟಿನ್... ದೇವರೆ! ನನ್ನ ಮುದ್ದಿನ ಹುಡುಗ ಸೂಟಿನ್! ಪ್ಯಾರಿಸಿನ ಇಷ್ಟು ದೊಡ್ಡ ಗ್ಯಾಲರಿಯಲ್ಲಿ ನನ್ನ ಸೂಟಿನಿನ ಪೇಂಟಿಂಗ್!...

ಮುದುಕ ತನ್ನ ತಲೆಯನ್ನು ಶೋಕೇಸಿನ ಗಾಜಿಗೆ ಅಂಟಿಸಿ ಚಿತ್ರವನ್ನು ತದೇಕ ಚಿತ್ತದಿಂದ ನೋಡತೊಡಗಿದ. ಅವನಿಗೆ ಹುಡುಗನ ನೆನಪಾಗತೊಡಗಿತು. ಆದರೆ, ಎಲ್ಲಿ ಅಂತಲೇ ಗೊತ್ತಾಗುತ್ತಿಲ್ಲ. ತುಂಬಾ ಸಮಯದ ಹಿಂದೆ ಇರಬೇಕು... ಇಪ್ಪತ್ತು ವರ್ಷಗಳ ಹಿಂದೆ? ಇಲ್ಲ ಮೊದಲ ಮಹಾಯುದ್ಧದ (1913) ವೇಳೆ?... ಇರಬೇಕು. ಅದೇ ಗೊಣ್ಣೆ ಸುರುಕ ಕೊಳಕು ಹುಡುಗ ಸೂಟಿನ್! ಅವನು ತುಂಬಾ ಚೆನ್ನಾಗಿ ಪೇಂಟ್ ಮಾಡುತ್ತಿದ್ದ ಎಂಬ ಒಂದೇ ಒಂದು ಕಾರಣಕ್ಕಾಗಿ ಮುದುಕನ ಅಚ್ಚು ಮೆಚ್ಚಿನ ಹುಡುಗನಾಗಿದ್ದ.

ಈಗ ಅವನಿಗೆ ಎಲ್ಲವೂ ನೆನಪಾಗತೊಡಗಿತು...

ರಾಶಿ ರಾಶಿ ಕಸ ಕೊಳೆತು ಬಿದ್ದು ನಾರುತ್ತಿದ್ದ ಬೀದಿ... ದಷ್ಟಪುಷ್ಟ ಬೆಕ್ಕುಗಳು ಹುಲಿಗಳಂತೆ ಅಡ್ಡಾಡುತ್ತಿದ್ದರೂ ಕ್ಯಾರೆ ಎನ್ನದ ಕಪ್ಪನೆ ಹೆಗ್ಗಣಗಳು... ಇದಾವುದರ ಪರಿವೆಯೂ ಇಲ್ಲದಂತೆ ಹೊಸ್ತಿಲ ಮೇಲೆ ಕಾಲುಗಳನ್ನಗಲಿಸಿ ಕುಳಿತು ಹರಟೆ ಹೊಡೆಯುತ್ತಿದ್ದ ಹೆಂಗಸರು... ಅದು ಯಾವ ಗಲ್ಲಿ?... ಮುದುಕನಿಗೆ ಎಷ್ಟು ಯೋಚಿಸಿದರೂ ನೆನಪಾಗಲಿಲ್ಲ.

ಕೊನೆಗೂ ನೆನಪಾದಾಗ ಮುದುಕನಿಗೆ ಖುಷಿಯಾಯಿತು. ಅದೊಂದು ಪುಟ್ಟ ಸ್ಟುಡಿಯೊ. ಒಂದೇ ಒಂದು ಕುರ್ಚಿ, ಒಂದು ಕೆಂಪುಸೋಫಾ. ರಾತ್ರಿ ಹೊತ್ತು ಹುಡುಗ ಅದರ ಮೇಲೆ ಮಲಗುತ್ತಿದ್ದ.